# "ಅಷ್ಟಾದಶ"ದ ಪ್ರಾಮುಖ್ಯ

ಮೀನಾ. ವಿ.

ಕೆಲವೊಮ್ಮೆ ಕಾಕತಾಳೀಯ ನ್ಯಾಯದಂತೆ ಕೆಲವು ಸಂಖ್ಯೆಗಳು ಪ್ರಾಮುಖ್ಯವನ್ನು ಪಡೆಯುತ್ತವೆ. ಅಂತಹ ಒಂದು ಸಂಖ್ಯೆಯಾದ ಅಷ್ಟಾದಶದ ಪ್ರಾಮುಖ್ಯವನ್ನು ವಿವರಿಸಿರುವ ಕುಮಾರಿ ಮೀನಾ ಅವರು ಬೆಂಗಳೂರು ರಾಮಕೃಷ್ಣ ಆಶ್ರಮದ ನಿಕಟ ಭಕ್ತರು.

"ಅಷ್ಟಾದಶ" ಎಂದರೆ ೧೮. ಈ ಸಂಖ್ಯೆಗೆ ನಮ್ಮ ಪುರಾಣಗಳಲ್ಲಿ, ಹಿಂದೂಧರ್ಮಶಾಸ್ತ್ರಗಳಲ್ಲಿ ಹಲವಾರು ಕಡೆ ಅತ್ಯಂತ ಪ್ರಾಮುಖ್ಯವನ್ನು ಕೊಡಲಾಗಿದೆ. ಹಾಗೆ ನೋಡಿದರೆ ಯುಗಾವತಾರರಾದ ಶ್ರೀರಾಮಕೃಷ್ಣ ಪರಮಹಂಸರ, ಸ್ವಾಮಿ ವಿವೇಕಾನಂದರ ವಿಷಯದಲ್ಲೂ ಈ ಅಷ್ಟಾದಶ ಸಂಖ್ಯೆ ಗಮನಾರ್ಹವಾಗಿದೆ. ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಜನ್ಮ ೧೮ನೇ ಫೆಬ್ರವರಿ ೧೮೩೬ರಂದು. ೧೮೩೬ನ್ನು ಕೂಡಿಸಿ ನೋಡಿದರೆ (೧+೮+೩+೬=೧೮) ಅದೂ ಕೂಡ ೧೮. ಇದು "ಅಷ್ಟಾದಶ"ದ ಒಂದು ದಿವ್ಯ ಮಹಿಮೆ.

ಒಮ್ಮೆ ದಕ್ಷಿಣೇಶ್ವರದಲ್ಲಿ ತಮ್ಮ ಕೊಠಡಿಯಲ್ಲಿ ಭಗವಾನ್ ಶ್ರೀರಾಮಕೃಷ್ಣರು ಕುಳಿತುಕೊಂಡಿದ್ದರು. ಅವರ ಎದುರಿಗೆ ಅಂದು ಜಗದ್‌ವಿಖ್ಯಾತರಾದ ಕೇಶವಚಂದ್ರಸೇನರೂ ವಿಜಯಕೃಷ್ಣ ಗೋಸ್ವಾಮಿಗಳೂ ತರುಣ ನರೇಂದ್ರನಾಥನೂ ಕುಳಿತುಕೊಂಡಿದ್ದರು. ಅವರನ್ನೆಲ್ಲಾ ಆನಂದದಿಂದ ನೋಡುತ್ತಾ ಶ್ರೀರಾಮಕೃಷ್ಣರ ದಿವ್ಯವಾದ ಚೇತನ ಊರ್ಧ್ವಗಾಮಿಯಾಯಿತು, ಹಾಗೂ ಅವರೆಲ್ಲರ ದಿವ್ಯಶಕ್ತಿಗಳ ಅರಿವೂ ಅವರಿಗೆ ಉಂಟಾಯಿತು. ತಕ್ಷಣ ಸಹಾಸ್ಯ ವದನರಾಗಿ ಅವರನ್ನೆಲ್ಲ ನೋಡುತ್ತಾ ಈ ರೀತಿ ಹೇಳಿದರು : "ನೋಡಿ, ಕೇಶವಚಂದ್ರ, ವಿಜಯಕೃಷ್ಣ ಮುಂತಾದವರು ಒಂದು ದಿವ್ಯ ಶಕ್ತಿಯಿಂದ ಒಡಗೂಡಿಯೇ ಇಷ್ಟು ವಿಶ್ವವಿಖ್ಯಾತರಾಗಿದ್ದಾರೆ. ಆದರೆ ನರೇಂದ್ರನಲ್ಲಿ (ಮುಂದೆ ಸ್ವಾಮಿ ವಿವೇಕಾನಂದರಲ್ಲಿ) ಅಂತಹ ಅಷ್ಟಾದಶ (೧೮) ದಿವ್ಯಶಕ್ತಿಗಳು ಪೂರ್ಣರೂಪದಲ್ಲಿ ಇವೆ. ಇದರಿಂದಾಗಿ ಆತ ಲೋಕಕಲ್ಯಾಣ ಮಾಡಿ ಜಗದ್‌ವಿಖ್ಯಾತನಾಗುತ್ತಾನೆ."

ಒಂದು ದಿನ ಸ್ವಾಮಿ ವಿವೇಕಾನಂದರು ಭಾವಸಮಾಧಿ, ನಿರ್ವಿಕಲ್ಪ ಸಮಾಧಿಗಳ ವಿಚಾರವಾಗಿ ಮಾತನಾಡುತ್ತಾ, ತಮ್ಮ ಶಿಷ್ಯರಾದ ಶರತ್‌ಚಂದ್ರ ಚಕ್ರವರ್ತಿಗಳಿಗೆ ಹೀಗೆ ಹೇಳಿದರು : "ಯಾವುದಾದರೂ ಒಂದು ವಿಧವಾದ ಭಾವದ ಕೊನೆಯ ಅವಸ್ಥೆಗೇ 'ಭಾವಸಮಾಧಿ' ಎಂದು ಹೆಸರು. ಆಮೇಲೆ ನಾನು ದೇಹವಲ್ಲ, ಮನಸ್ಸಲ್ಲ, ಬುದ್ಧಿಯಲ್ಲ, ಎಂದು ನೇತಿ ನೇತಿ ಮಾರ್ಗವನ್ನು ಅನುಸರಿಸಿ ಜ್ಞಾನಿಯಾದ ಸಾಧಕನು ಚಿನ್ಮಾತ್ರ ಸ್ಥಿತಿಯಲ್ಲಿದ್ದರೆ ನಿರ್ವಿಕಲ್ಪ ಸಮಾಧಿಯುಂಟಾಗುತ್ತದೆ. ಒಂದೊಂದೇ ಭಾವವನ್ನು ತೆಗೆದುಕೊಂಡು ಅದರಲ್ಲಿ ಸಿದ್ಧನಾಗಬೇಕಾದರೆ ಎಷ್ಟೋ ಜನ್ಮಗಳು ಹಿಡಿಸುತ್ತದೆ. ಹೀಗಿರಲು ಭಾವರಾಜ್ಯದ ರಾಜರಾದ ನಮ್ಮ ಶ್ರೀರಾಮಕೃಷ್ಣ ಪರಮಹಂಸದೇವರು ಅಂತಹ 'ಅಷ್ಟಾದಶ' ಭಾವಗಳಲ್ಲಿ ಸಿದ್ಧಿಯನ್ನು ಪಡೆದಿದ್ದರು" (**ಕೃತಿಶ್ರೇಣಿ: ಸಂಪುಟ ೮, ಪುಟ ೨೩**). ಇದೂ ಸಹ ಅಷ್ಟಾದಶದ ಒಂದು ಪ್ರಾಮುಖ್ಯ.

ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ನಿನ ಮೂಲ ದಿವ್ಯಶಕ್ತಿಗಳು ಅಷ್ಟಾದಶ. ಆ ದಿವ್ಯ ಶಕ್ತಿಗಳಾರೆಂದರೆ ೧. ಯುಗಾವತಾರರಾದ ಭಗವಾನ್ ಶ್ರೀರಾಮಕೃಷ್ಣರು, ೨. ಜಗನ್ಮಾತೆ ಶ್ರೀ ಶಾರದಾದೇವಿಯವರು, ೩. ಸ್ವಾಮಿ ವಿವೇಕಾನಂದರು, ೪. ಸ್ವಾಮಿ ಬ್ರಹ್ಮಾನಂದರು, ೫. ಸ್ವಾಮಿ ಪ್ರೇಮಾನಂದರು, ೬. ಸ್ವಾಮಿ ಶಿವಾನಂದರು, ೭. ಸ್ವಾಮಿ ಯೋಗಾನಂದರು, ೮. ಸ್ವಾಮಿ ನಿರಂಜನಾನಂದರು, ೯. ಸ್ವಾಮಿ ರಾಮಕೃಷ್ಣಾನಂದರು, ೧೦. ಸ್ವಾಮಿ ಅದ್ವೈತಾನಂದರು, ೧೧. ಸ್ವಾಮಿ ಅಭೇದಾನಂದರು, ೧೨. ಸ್ವಾಮಿ ತುರೀಯಾನಂದರು, ೧೩. ಸ್ವಾಮಿ ಶಾರದಾನಂದರು, ೧೪.ಸ್ವಾಮಿ ಅಖಂಡಾನಂದರು, ೧೫. ಸ್ವಾಮಿ ವಿಜ್ಞಾನಾನಂದರು, ೧೬.ಸ್ವಾಮಿ ಅದ್ಭುತಾನಂದರು, ೧೭. ಸ್ವಾಮಿ ತ್ರಿಗುಣಾತೀತಾನಂದರು, ೧೮.ಸ್ವಾಮಿ ಸುಬೋಧಾನಂದರು.

ಶ್ರೀರಾಮಕೃಷ್ಣ (೫), ಶ್ರೀಶಾರದಾ ದೇವಿ (೬) ಮತ್ತು ಸ್ವಾಮಿ ವಿವೇಕಾನಂದ (೭) ಈ ದಿವ್ಯತ್ರಯರ ಹೆಸರುಗಳ ಒಟ್ಟು ಅಕ್ಷರಗಳ ಸಂಖ್ಯೆ ೧೮ ಆಗುತ್ತದೆ. ಇವರ ಹೆಸರಿನಲ್ಲಿ ಇರುವ ಮೂರು ಮುಖ್ಯ ಸಂಸ್ಥೆಗಳ ಹೆಸರಿನ ಅಕ್ಷರಗಳನ್ನು ಸೇರಿಸಿದರೂ ೧೮ ಆಗುತ್ತದೆ : ರಾಮಕೃಷ್ಣ ಮಠ (೬), ರಾಮಕೃಷ್ಣ ಮಿಷನ್ (೬), ಶ್ರೀಶಾರದಾ ಮಠ (೬).

ಎಲ್ಲ ಕಾಲಕ್ಕೂ ಸಲ್ಲುವ ವೇದಗಳನ್ನು ಶ್ರುತಿ ಎಂದು ಕರೆಯುತ್ತಾರೆ. ಅಂತೆಯೇ ಕಾಲಕಾಲಕ್ಕೆ ಬದಲಾಗುವ ಜನರ ಆಚಾರ ಸಂಹಿತೆಯ ಸೂತ್ರಗಳು ಸ್ಮೃತಿಗಳೆನಿಸಿವೆ. ಇವೂ ಅಷ್ಟಾದಶವೇ: ೧.ಮನು ೨.ಯಾಜ್ಞವಲ್ಕ್ಯ ೩.ಅತ್ರಿ, ೪.ವಿಷ್ಣು ೫. ಹರೀತ ೬.ಭಾರ್ಗವ ೭.ಆಂಗೀರಸ ೮.ಯಮ ೯. ಆಪಸ್ತಂಭ ೧೦.ಸಂವರ್ತನ ೧೧. ಕಾತ್ಯಾಯನ ೧೨. ಬಾರ್ಹಸ್ಪತ್ಯ ೧೩. ಪರಾಶರ ೧೪. ವ್ಯಾಸ ೧೫, ಸಾಂಖ್ಯ ೧೬.ಲಿಖಿತ ೧೭.ದಕ್ಷ ೧೮.ಗೌತಮ.

ಇನ್ನು ನಮ್ಮ ಪುರಾಣಗಳಲ್ಲಂತೂ "ಅಷ್ಟಾದಶ" ಸಂಖ್ಯೆ ಪ್ರಾಮುಖ್ಯ ಪಡೆದಿದೆ. ಭಗವಾನ್ ವೇದವ್ಯಾಸರು ಬರೆದಂತಹ ಪುರಾಣಗಳು "ಅಷ್ಟಾದಶ" : ೧. ಮತ್ಸ್ಯ ೨. ಮಾರ್ಕಂಡೇಯ ೩. ಭಾಗವತ ೪. ಭವಿಷ್ಯ, ೫. ಬ್ರಹ್ಮಾಂಡ ೬. ಬ್ರಹ್ಮಪುರಾಣ, ೭. ಬ್ರಹವೈವರ್ತ ೮. ವಾಮನ ೯. ವಿಷ್ಣು ೧೦. ವರಾಹ ೧೧. ಅಗ್ನಿ ೧೨. ನಾರದ ೧೩. ಪದ್ಮ ೧೪. ಲಿಂಗ ೧೫. ಗುರುಡ ೧೬ ಕೂರ್ಮ ೧೭.ಸ್ಕಾಂಧ ೧೮.ವಾಯು

ಇನ್ನು ಅಷ್ಟಾದಶ ಉಪಪುರಾಣಗಳಿವೆ : ೧. ಸನತ್ಕುಮಾರ, ೨. ನಾರಸಿಂಹ, ೩. ಸ್ಕಾಂಧ, ೪. ಶಿವಧರ್ಮ, ೫. ದೌಶ್ವಾಸನ, ೬ ನಾರದೀಯ, ೭. ಕಪಿಲ, ೮. ಮಾನಸ, ೯. ಜೈನ, ೧೦. ಬ್ರಹ್ಮಾಂಡ, ೧೧ ವಾರಣ, ೧೨. ಕೌಶಿಕ, ೧೩.ಲಿಂಗ, ೧೪. ಸಾಂಬ ೧೫. ಸೌರ, ೧೬.ಪರಾಶರ, ೧೭.ಮರೀಚ, ೧೮.ಭಾರ್ಗವ.

ನಮ್ಮ ಇತಿಹಾಸ ಗ್ರಂಥಗಳಲ್ಲಿ ಮುಖ್ಯವಾದುದು ಮಹಾಭಾರತ. ಭಗವಾನ್ ವೇದವ್ಯಾಸರಚಿತವೆನಿಸಿರುವ ಮಹಾಭಾರತವು ಅಷ್ಟಾದಶ ಪರ್ವಗಳಾಗಿ ವಿಂಗಡಿಸಲ್ಪಟ್ಟಿದೆ. ಮಹಾಭಾರತದಲ್ಲಿ ಕೌರವರಿಗೂ ಪಾಂಡವರಿಗೂ ನಡೆದ ಪ್ರಸಿದ್ಧ ಕುರುಕ್ಷೇತ್ರದ ಯುದ್ಧ ೧೮ ದಿನಗಳು. ಆ ಮಹಾಯುದ್ಧದಲ್ಲಿ ಪಾಲ್ಗೊಂಡ ಸೈನ್ಯಗಳ ಸಂಖ್ಯೆ ೧೮ ಅಕ್ಷೋಹಿಣಿ. ಈ ಅಕ್ಷೋಹಿಣಿ ಸೈನ್ಯದಲ್ಲಿ ಬರುವ ಆನೆ, ಕುದುರೆ, ಕಾಲ್ಬಲಗಳ ಪ್ರತ್ಯೇಕ ಸಂಖ್ಯೆಗಳ ಅಂಕಿಗಳನ್ನು ಕೂಡಿಸಿದಾಗಲೂ ಮೊತ್ತ ೧೮ ಬರುತ್ತದೆ. ಇನ್ನು ಮಹಾಭಾರತದ ಶಿರೋಮಣಿಯಂತಿರುವ ಭಗವದ್‌ಗೀತೆಯ ಅಧ್ಯಾಯಗಳು ಅಷ್ಟಾದಶ. ಭಗವದ್ಗೀತೆಯ ಸಾರವೇ ಎರಡನೆಯ ಅಧ್ಯಾಯದಲ್ಲಿದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಈ ಅಧ್ಯಾಯದಲ್ಲಿ ಆತ್ಮನ ವರ್ಣನೆಯನ್ನೊಳಗೊಂಡ ಶ್ಲೋಕಗಳ ಸಂಖ್ಯೆ ಹದಿನೆಂಟು ಮತ್ತು ಅದೇ ಅಧ್ಯಾಯದಲ್ಲಿ ಸ್ಥಿತಪ್ರಜ್ಞನ ಲಕ್ಷಣ ೧೮ ಶ್ಲೋಕಗಳಲ್ಲಿ ವರ್ಣಿತವಾಗಿದೆ.

ಜಗನ್ಮಾತೆಯಾದ ಆದಿಶಕ್ತಿಯ ಪೀಠಗಳು ಅಷ್ಟಾದಶ : ೧. ಲಂಕೆಯಲ್ಲಿನ ಶಾಂಕರೀದೇವಿ, ೨. ಕಂಚಿಯ ಕಾಮಾಕ್ಷೀ, ೩. ಪ್ರದ್ಯುಮ್ನದಲ್ಲಿ ಶೃಂಗಳಾದೇವಿ, ೪. ಕ್ರೌಂಚ ಪಟ್ಟಣದಲ್ಲಿ ಚಾಮುಂಡೀ, ೫.ಅಲಂಪೂರಿನಲ್ಲಿ ಜೋಗಲಾಂಬ, ೬. ಶ್ರೀಶೈಲದಲ್ಲಿ ಭ್ರಮರಾಂಬ, ೭.ಕೊಲ್ಲಾಪುರದಲ್ಲಿ ಮಹಾಲಕ್ಷ್ಮೀ, ೮.ಮಹ್ಯಪುರದಲ್ಲಿ ಏಕವೀರಿಕ, ೯. ಉಜ್ಜಯಿನಿಯಲ್ಲಿ ಮಹಾಕಾಳೀ, ೧೦.ಪಿಠಿಕಾಪುರಿಯಲ್ಲಿ ಪುರುಹೂತಿಕೆ, ೧೧.ಒಡ್ಯದಲ್ಲಿ ಗಿರಿಜಾದೇವಿ, ೧೨. ದ್ರಾಕ್ಷಾರಾಮದಲ್ಲಿ ಮಾಣಿಕ್ಯಾಂಬಿಕಾ, ೧೩. ಹರಿಕ್ಷೇತ್ರದಲ್ಲಿ ಕಾಮಾಖ್ಯಾ, ೧೪. ಪ್ರಯಾಗದಲ್ಲಿ ಮಾಧವೇಶ್ವರೀ ೧೫. ಜ್ವಾಲದಲ್ಲಿ ವೈಷ್ಣವೀ, ೧೬. ಗಯೆಯಲ್ಲಿ ಮಂಗಳಗೌರಿ, ೧೭. ವಾರಾಣಸಿಯಲ್ಲಿ ವಿಶಾಲಾಕ್ಷಿ, ೧೮. ಕಾಶ್ಮೀರದಲ್ಲಿ ಸರಸ್ವತೀ.

ಭಾರತದಲ್ಲಿ ಅನೇಕ ನದಿಗಳಿದ್ದಾಗ್ಯೂ, ೧೮ ತೀರ್ಥಗಳನ್ನು ಬಹಳ ಪವಿತ್ರವೆಂದು ಎಣಿಸುತ್ತಾರೆ : ೧. ಗಂಗಾ, ೨.ಯಮುನಾ, ೩. ಸರಸ್ವತೀ, ೪. ಸಿಂಧು, ೫. ಸಬರ್ಮತಿ, ೬. ಮಹಾನದಿ, ೭. ನರ್ಮದಾ, ೮. ಗೋದಾವರೀ, ೯. ಪ್ರಣತ, ೧೦. ಭೀಮಾ, ೧೧. ತುಂಗಭದ್ರ, ೧೨, ಕೃಷ್ಣಾ, ೧೩. ತಪತಿ, ೧೪. ಕಾವೇರಿ, ೧೫. ತಾಮ್ರಪರ್ಣೀ, ೬. ಬ್ರಹ್ಮಪುತ್ರ, ೧೭. ಸರಯೂ, ೧೮. ಶಿಪ್ರಾ.

ಬೆಟ್ಟದಮೇಲೆ ದೇವಾಲಯವನ್ನು ನಿರ್ಮಾಣ ಮಾಡಿದರೆ ಆ ದೇವಾಲಯದ ಗರ್ಭಗುಡಿಯ ಸೋಪಾನಗಳು ಅಷ್ಟಾದಶವಾಗಿರಬೇಕೆಂದು ವಾಸ್ತುಶಿಲ್ಪಗಳು ತಿಳಿಸುತ್ತವೆ. ಯಾವುದೇ ಯಜ್ಞವನ್ನು ಮಾಡಬೇಕಾದರೂ ಮುಖ್ಯವಾಗಿ ಅಷ್ಟಾದಶ ಋತ್ವಿಕ್‌ಗಳು ಇರಲೇಬೇಕಾಗುತ್ತದೆ. ಮೋಕ್ಷಸಾಧನೆಯಲ್ಲಿ ಅಷ್ಟಾದಶದ ಪಾತ್ರವನ್ನು ಕುರಿತು ಒಂದು ಶ್ಲೋಕ ಹೀಗೆ ತಿಳಿಸುತ್ತದೆ :

ದೃಶ್ಯಂ ದೇಹಂ ಚ ವಾಗಾದಿಃ ಶ್ರೋತ್ರಾದೀಂದ್ರಿಯಪಂಚಕಮ್
ಪ್ರಾಣಾದಿಪಂಚಕಂ ಚೈವ ತಥಾಂತಃಕರಣಮೇವ ಚ ।
ಮುಕ್ತಿಸೌಧಸ್ಯ ಸೋಪಾನಾ ಅಷ್ಟಾದಶ ಇತೀರಿತಾಃ
ಏತಾನುತ್ಕ್ರಮೇಣಾರುಹ್ಯ ಬ್ರಹ್ಮಭೂಯಾಯ ಕಲ್ಪತೇ ॥

"ಮೋಕ್ಷಸೌಧಕ್ಕೆ ಏರುವ ಸಾಧಕನು ಮುಖ್ಯವಾಗಿ ಅಷ್ಟಾದಶ ಮೆಟ್ಟಲುಗಳನ್ನು ಹತ್ತಬೇಕು. ಅಂತಃಕರಣ ಚತುಷ್ಟಯ ೧, ಪಂಚಪ್ರಾಣಗಳು ೫, ಪಂಚಜ್ಞಾನೇಂದ್ರಿಯಗಳು ೫, ಪಂಚ ಕರ್ಮೇಂದ್ರಿಯಗಳು ೫, ದೇಹ ೧ ದೃಶ್ಯ ೧ (ಒಟ್ಟು, ೧೮)."

ಹೀಗೆ ಅಷ್ಟಾದಶ ಎಂಬುದು ಹಿಂದೂಧಾರ್ಮಿಕ ಪ್ರಜ್ಞೆಯಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿರುವುದನ್ನು ನಾವು ಕಾಣಬಹುದು.

### ಮಾಸ್ಟರ್ ಮಹಾಶಯರ ಉದಾರತೆ

ಎಷ್ಟೋ ಜನರಿಗೆ "ಶ್ರೀರಾಮಕೃಷ್ಣ ವಚನವೇದ"ವನ್ನು ಬರೆದ ಮಾಸ್ಟರ್ ಮಹಾಶಯರ ಉದಾರತೆಯ ಅರಿವೇ ಇಲ್ಲ. ಅವರ ಬಲಗೈ ನೀಡಿದ ದಾನ ಎಡಗೈಗೆ ತಿಳಿಯುತ್ತಿರಲಿಲ್ಲ. ಸ್ವಾಮಿ ವಿವೇಕಾನಂದರ ತಂದೆ ತೀರಿಹೋದ ಮೇಲೆ ಅವರ ಸಂಸಾರವು ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿತ್ತು. ಅಂತಹ ವಿಷಮ ಪರಿಸ್ಥಿತಿಯಲ್ಲಿ ಮೂರು ತಿಂಗಳುಗಳ ಕಾಲ ಅವರ ಸಂಸಾರವು ಮಾಸ್ಟರ್ ಮಹಾಶಯರ ಆರ್ಥಿಕ ನೆರವಿನಿಂದ ನಡೆಯಿತು. ಆದರೆ ಸ್ವಾಮಿ ವಿವೇಕಾನಂದರಿಗೇ ಈ ವಿಷಯ ತಿಳಿದಿರಲಿಲ್ಲ! ಪ್ರತಿತಿಂಗಳ ಕೊನೆಯಲ್ಲಿ ಅವರು ಮನಿಆರ್ಡರ್ ಫಾರಂಗಳನ್ನು ಭರ್ತಿಮಾಡುತ್ತಿರುವುದನ್ನು ಸ್ವಾಮೀಜಿಯವರು ನೋಡುತ್ತಿದ್ದರು. ಅದು ತಮ್ಮ ಸಂಸಾರಕ್ಕೆ ಎಂದು ತಿಳಿದೇ ಇರಲಿಲ್ಲ. ಸ್ವಾಮೀಜಿಯ ಸೋದರ ಮಹೇಂದ್ರನಾಥ ದತ್ತರು ಬರೆದ ಪುಸ್ತಕದಲ್ಲಿ ಮಾತ್ರವೇ ಇದರ ಉಲ್ಲೇಖವಿದೆ. ಶ್ರೀರಾಮಕೃಷ್ಣರ ನಿರ್ವಾಣಾನಂತರ ಮಹಾಮಾತೆ ಶಾರದಾದೇವಿಯವರು ಬಹಳವಾದ ಆರ್ಥಿಕ ಮುಗ್ಗಟ್ಟಿನಲ್ಲಿ ಸಿಲುಕಿದ್ದರು. ಯಾರಿಗೂ ತಿಳಿಯದಂತೆ ಮಹಾಮಾತೆಯವರಿಗೆ ಹಣವನ್ನು ಕಳುಹಿಸುತ್ತಿದ್ದವರಲ್ಲಿ ಮಾಸ್ಟರ್ ಮಹಾಶಯರೇ ಮೊದಲಿಗರು. ತಮಗೆ ಮೂರು ಶಾಲೆಗಳಲ್ಲಿ ಬರುತ್ತಿದ್ದ ಸಂಬಳದಲ್ಲಿ ಒಂದನ್ನು ಪ್ರತಿತಿಂಗಳೂ ತಾಯಿಯವರಿಗೆ ಕಳುಹಿಸುತ್ತಿದ್ದರು. ನಿಃಸ್ವಾರ್ಥ ಜೀವಿಗಳ ಮಹಾನ್ ತ್ಯಾಗಗಳು ಯಾವ ಸದ್ದುಗದ್ದಲವಿಲ್ಲದೆ, ಆಡಂಬರವಿಲ್ಲದೆ, ಯಾರೊಬ್ಬರ ಗೌರವಾದರಗಳನ್ನೂ ನಿರೀಕ್ಷಿಸದೆ ಇರುತ್ತವೆ. (ಸಂಗ್ರಹ : ಸ್ವರ್ಣಗೌರಿ)